ನನಗೆ ಇಷ್ಟ ಇರಲಿಲ್ಲ' ಎಂದು ಗಂಭೀರವಾಗಿ ಹೇಳಿ 'ನೀವು ನನಗೆ ಕೊಟ್ಟ ಗಿಡವನ್ನು ನಮ್ಮ ಮನೆಯ ದನದ ಕರು ತಿಂದದ್ದನ್ನು ಹಿಂದೆ ಹೇಳಿದ್ದೆ ತಾನೇ? ಆಮೇಲೆ ಯಾವ ರೀತಿ ಸಾಕಿದರೂ ಅದು ಬೆಳೆಯಲೇ ಇಲ್ಲ ನೋಡಿ' ಎಂದು ದುಃಖ ಪ್ರದರ್ಶಿಸಿ, 'ಮಳೆಗಾಲದಲ್ಲಿ ಏನಾಯಿತೋ ಏನೋ. ಅದು ಕೊಳೆಯತೊಡಗಿದ್ದು ನೋಡಿ ಅದನ್ನು ಕಿತ್ತು ಅಲ್ಲಿ ತೆಂಗಿನ ಗಿಡ ಹಾಕಿದ್ದೇನೆ' ಎಂದು 'ನೀವು ಹಣ್ಣು ತಂದದ್ದು ತುಂಬಾ ಖುಶಿಯಾಯ್ತು ಥ್ಯಾಂಕ್ಸ್ ಥ್ಯಾಂಕ್ಸ್' ಎಂದರು ಬಾಯ್ತುಂಬ.

ಸಿಸಿಲಾ ಟೀಚರಮ್ಮನಿಗೆ ಏನು ಹೇಳಲೂ ತೋಚಲಿಲ್ಲ. ಆಕೆ ಮಾತು ಬದಲಾಯಿಸಿ ಅದು ಇದು ಮಾತನಾಡಿಸಿ 'ಎಲ್ಲಿ ನಿಮ್ಮ ಸೆರಗೊಡ್ಡಿ, ನಾನು ಈ ನಾಲ್ಕು ಹಣ್ಣುಗಳನ್ನು ನಿಮ್ಮ ಸೆರಗಿಗೆ ಸುರಿಯಬೇಕು' ಎಂದು ನಗುತ್ತಾ ಹೇಳಿದಾಗ ಸೇವಂತಿಯಕ್ಕ 'ಅಷ್ಟೆಲ್ಲ ಭಾವಾವೇಶಕ್ಕೆ ಒಳಗಾಗಬಾರದು ಟೀಚರಮ್ಮ. ನೀವು ಹಣ್ಣುಗಳನ್ನು ನನ್ನ ಸೆರಗಿಗೆ ಹಾಕುವುದು ಬೇಡ. ನನ್ನ ಕೈಯಲ್ಲೇ ಕೊಡಿ. ನಾನು ಸಂತೋಷದಿಂದ ಹಣ್ಣುಗಳನ್ನು ತೆಗೆದುಕೊಳ್ಳುತ್ತೇನೆ' ಎಂದು ಆ ನಾಲ್ಕೂ ಹಣ್ಣುಗಳನ್ನು ಟೀಚರಮ್ಮನಿಂದ ಕೈಯಲ್ಲೇ ತೆಗೆದುಕೊಂಡು 'ಅವೇನು ಮಹಾ!' ಎಂಬಂತೆ ಧಿಮಾಕು ತೋರಿಸಿ ಸ್ವಲ್ಪ ಹೊತ್ತಿನ ಮೇಲೆ ಟೀಚರಮ್ಮನನ್ನು ಬೀಳ್ಕೊಟ್ಟರು.

ಸೇವಂತಿಯಕ್ಕನ ಮನೆಯಿಂದ ನಾಲ್ಕು ಹೆಜ್ಜೆ ಮುಂದೆ ಬರುವಾಗ ಟೀಚರಮ್ಮನಿಗೆ ಸೀತಾಪುರದ ಹೈಸ್ಕೂಲಿನಲ್ಲಿದ್ದು ನಿವೃತ್ತರಾದ ಕನ್ನಡ ಪಂಡಿತ ಶಂಭಟ್ಟರು ಇದಿರಾದರು. ಪರಸ್ಪರ ನಮಸ್ಕಾರವಾದ ಮೇಲೆ ಆ, ಇ ಮಾತುಗಳನ್ನಾಡಿದ ಭಟ್ಟರು 'ನೀವು ಕೇಳಿದವರಿಗೂ ಕೇಳದವರಿಗೂ ಕೈ ಎತ್ತಿ ಮಾವಿನಹಣ್ಣುಗಳನ್ನು ಕೊಡುತ್ತೀರಂತೆ ಟೀಚರಮ್ಮ. ಹೌದಾದರೆ ಅದು ಒಳ್ಳೇದು ಒಳ್ಳೇದು. ನಮ್ಮ ರಾಮಾಯಣದ ಶಬರಿ ಗೊತ್ತಲ್ಲ ನಿಮಗೆ? ಆಕೆ ರಾಮ ಇವನೇ ಎಂದು ಸಿಕ್ಕು ಸಿಕ್ಕವರಿಗೆಲ್ಲ ಹಣ್ಣು ಕೊಟ್ಟಿರಬೇಕು ಎನ್ನುವ ಪ್ರಜ್ಞೆ ನಿಮ್ಮದು! ವಾಲ್ಮೀಕಿ ಮಾತ್ರ ಸ್ವಲ್ಪ ತೂಕಡಿಸಿ, ಶಬರಿ ರಾಮನಿಗೆ ಮಾತ್ರ ಹಣ್ಣು ನೀಡಲು ಕಾದಿದ್ದಳು ಅಂದ ಹಾಗಿದೆ. ನನ್ನ ದೃಷ್ಟಿಯಲ್ಲಿ ಶಬರಿ ಇದ್ದದ್ದಾದರೆ ಅದು ನಿಮ್ಮ ಹಾಗೇ!' ಎಂದರು.

ಸಿಸಿಲಾ ಟೀಚರಮ್ಮನಿಗೆ ಕಣ್ಣು ತುಂಬಿ ಬಂತು. ಆದರೆ ಮಾತು ಬರಲಿಲ್ಲ. ಆಕೆ 'ಬನ್ನಿ' ಎಂದು ಪಂಡಿತರನ್ನು ಮನೆಗೆ ಕರೆದು ಕುಳ್ಳಿರಿಸಿ 'ಇಕ್ಕೊಳ್ಳಿ ನಿಮಗೂ ನಾಲ್ಕು ಹಣ್ಣು' ಎಂದು ನೀಡಿದಾಗ, ಪಂಡಿತರು 'ಇಲ್ಲ ಟೀಚರಮ್ಮ, ಮೊನ್ನೆ ನನ್ನ ಮಗನಲ್ಲಿ ನೀವು ಆಗಲೇ ನಮಗೆ ಎರಡು ಹಣ್ಣು ನೀಡಿದ್ದೀರಿ' ಎಂದು ನಿರಾಕರಿಸಲು ಮುಂದಾದರು.

ಇದೆಲ್ಲ ಕಳೆದ ವರುಷದ ಮಾತು. ಈ ವರುಷದ ಬೇಸಗೆಯಲ್ಲಿ ಸಿಸಿಲಾ ಟೀಚರಮ್ಮ ಅವರ ಮಾವಿನ ಮರ ಹೂವು ಬಿಟ್ಟ ಹದಿನೈದು ದಿನ ಆಗುವಾಗ ಎಲ್ಲೋ ಇದ್ದ ಗಾಳಿ ಬೇಕಂತಲೇ ಎಂಬಂತೆ ಸೀತಾಪುರ ಟೀಚರಮ್ಮನ ಮನೆಯಾಚೆ ಬೀಸಿ ವಿಪರೀತ ಮಳೆ ಸುರಿಯಿತು. ಟೀಚರಮ್ಮ ನೋಡು ನೋಡುತ್ತಿದ್ದ ಹಾಗೇ, ಅವರ ಅಂಗಳವನ್ನು ವಿಸ್ತರಿಸಿದ್ದ ವೈಯಪ್ರೆಯ ಎಕ್ಸ್‌ಬಿಸ್ಪೋಸಿಸ್ ಶೀಟುಗಳೂ ಗಾಳಿಗೆ ಹಾರಿಹೋದುವು. ಆಕೆಯ ಕಣ್ಣೆದುರಲ್ಲೇ ಮಾವಿನ ಮರದ ಎಲ್ಲಾ ಮಾವಿನ ಮಿಡಿಗಳು ಉದುರಿಬಿದ್ದುವು. ಅದು ಸಾಲದು ಎನ್ನುವಂತೆ ಗಾಳಿ ಮರದ ಕೊಂಬೆರೆಂಬೆಗಳನ್ನೂ ಮುರಿದು ಕಿತ್ತೆಸೆಯಿತು. ಟೀಚರಮ್ಮನ ತೋಟದಲ್ಲಿದ್ದ ಬಾಳೆಗೀಳೆ ಸಪೋಟ ಗಿಡಗಳನ್ನೆಲ್ಲ ನೆಲಸಮಗೊಳಿಸಿ, ಆಮೇಲೆ 'ಭೋ'ರಿಡುತ್ತಾ ಕೊನೆಗೆ ಮಾವಿನಗಿಡವನ್ನೇ ಬುಡಮೇಲೆ ಮಾಡಿ ಹೊರಟುಹೋಯಿತು.

ಟೀಚರಮ್ಮ ಆಕಾಶವೇ ಮೈಮಲೆ ಬಿದ್ದ ಹಾಗೆ ಅಳುತ್ತಾ ಕುಳಿತರು. ಆ ಅಳುವಿನ ಮುಂದೆ